ಅಕ್ಷಯ ಜೈನ್, ಹೂವಿನಹಡಗಲಿ
● ಎರಡು ಕಾಲು, ಒಂದಕ್ಕೆ ಜೋಡಿಸಿದಂತೆ ಇನ್ನೊಂದನ್ನು ಇಡುವಂತಿಲ್ಲ. ಏಕೆ ಸಾರ್?




ಜೋಡಿಸಿದರೆ ಫೆವಿಕಾಲಿನಂತಾಗಿ ಚಲನೆ ಸ್ತಬ್ಧವಾಗುವುದರಿಂದ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
● ಕೃಷ್ಣಾ ಎಂದು ಕರೆದರೆ 'ನಾನು ಇಲ್ಲೇ ಇದ್ದೇನೆ' ಎನ್ನುತ್ತಾರಲ್ಲ ನನ್ನ ಗಂಡ...?
ಒಪ್ಪಿಕೊಂಡುಬಿಡಿ. ಇಲ್ಲವಾದರೆ ಇನ್ನು 15,999 ಸ್ತ್ರೀಯರ ಹಿಂದೆ ಹೋಗಿ ರಂಪ ಮಾಡಿಕೊಂಡಾರು.

ನರಸಿಂಹ ಪೈ, ಹೊನ್ನಾವರ
● ಅರ್ಧಾಂಗಿಯಾದ ಹೆಂಡತಿ ಅಂಗಿಯ ಯಾವ ಭಾಗ?
ಜಗ್ಗಲು ಅನುಕೂಲವಾದ ಕಾಲರ್ ಭಾಗ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
● ಮೂಕಿ ಚಿತ್ರಗಳನ್ನು ಬೇರೆ ಭಾಷೆಗೆ ಡಬ್ ಮಾಡುವುದು ಹೇಗೆ?




ಅನ್ಯಭಾಷಿಗರಿಗೆ ಚಿತ್ರ ತೋರಿಸಿದರೆ ಸಾಕು. ಕೂಡಲೆ ಅದು ಅವರ ಮನದಲ್ಲೇ ಅವರ ಭಾಷೆಗೆ ಡಬ್ ಆಗಿಬಿಡುತ್ತದೆ.

ಕುಮಾರ ಚಲವಾದಿ, ಹಾಸನ
● ಸನ್ಯಾಸಿಗಳು ಮಹಿಳೆಯರಿಗೆ ಏಕೆ ದರ್ಶನ ನೀಡಬೇಕು?
ವಾಸ್ತವವೇ ಬೇರೆಯಂತೆ; ಮಹಿಳೆಯರ ದರ್ಶನಕ್ಕಾಗಿ ಸನ್ಯಾಸಿಗಳು ಹಾತೊರೆಯುತ್ತಿರುತ್ತಾರಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
● ಮದುವೆಗೆ ತಾಳಿ ಬೇಕೇ ಬೇಕೆ? ನಂಬಿಕೆ ಶಾಶ್ವತ ಅಲ್ಲವೆ ರಾಂಜಿ?
ನಿಜ. ತಾಳಿ ತವರಿನವರು ಹೆಣ್ಣು ಕೊಟ್ಟಿದ್ದಕ್ಕೆ ಅತ್ತೆಯ ಮನೆಯವರು ಕೊಡುವ ರಸೀದಿಯಷ್ಟೆ.

ಪಿ.ಎಸ್. ಶ್ರೀವತ್ಸ, ಬೆಂಗಳೂರು
● ವಿರೋಧ ಪಕ್ಷ; ಇದರ ನಿಜವಾದ ಅರ್ಥ?
ನಮ್ಮ ದೇಶದಲ್ಲಂತೂ ಶೂನ್ಯ ಮಿದುಳು, ಉದ್ದ ನಾಲಿಗೆ, ಕರ್ಕಶ ಕಂಠ ಇರುವ ಅನರ್ಥದ ಜಂತು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
● ಸತಿ ಸಹಗಮನ ಪದ್ಧತಿಯನ್ನು ಸರ್ಕಾರ ಮತ್ತೆ ಜಾರಿ ಮಾಡಿದರೆ?
ಸತಿ ಅಗ್ನಿಸ್ನೊಳಕ್ಕೆ ಮದುವೆ ಆದ್ರೆ ತಾನೇ! ಲಿವಿಂಗ್ ಟುಗೆದರ್ರಲ್ಲೇ ಇದ್ದುಬಿಡುತ್ತಾರೆ.

ತೂರಗಲ್ಲ ಉಮೇಶ, ರಾಮದುರ್ಗ
● ಮದುವೆಗೆ ಮುಂಚೆಯೇ ನನ್ನ ಗೆಳತಿ ನನ್ನ ಪಗಾರ ಎಷ್ಟೆಂದು ಕೇಳುತ್ತಿದ್ದಾಳೆ. ನಿಜ ಹೇಳಲೋ, ಸುಳ್ಳು ಹೇಳಲೋ?
ಹ್ಞ. ನಿಮ್ಮ ಸ್ಯಾಲರಿ ಸ್ಲಿಪ್ ಆಗಲೇ ಅವಳ ಕೈಯಲ್ಲಿದೆ. ನಡೆಯುತ್ತಿರುವುದು ಎನ್‌ಕ್ವೈರಿ ಅಲ್ಲ, ವೆರಿಫಿಕೇಷನ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
● ಸ್ವರ್ಗಕ್ಕೆ ಬಾಗಿಲು ಇಲ್ಲದೇ ಇದ್ದಿದ್ದರೆ ಹೇಗಿರುತ್ತಿತ್ತು ಸಾರ್?
ವೈಕುಂಠ ಏಕಾದಶಿಯಂದು ವೆಂಕಟರಮಣನ ದೇವಸ್ಥಾನದಲ್ಲಿ ನೂಕುನುಗ್ಗಲು ತಪ್ಪುತ್ತಿತ್ತು.

ಕೆ.ಎನ್. ಗೋಪಾಲಕೃಷ್ಣ, ಬೆಂಗಳೂರು
● ನಿಖರವಾದ ಸುದ್ದಿಯೊಂದನ್ನು ವಾಹಿನಿಗಳು, ಪತ್ರಿಕೆಗಳು ನಾನಾ ರೀತಿಯಲ್ಲಿ ವ್ಯಾಖ್ಯಾನಿಸುತ್ತವಲ್ಲ, ಯಾವುದನ್ನು ನಂಬುವುದು?
ಸುದ್ದಿ ಆನೆ. ವಾಹಿನಿ/ಪತ್ರಿಕೆ ಕುರುಡರು. ಅವರವರ ಕೈಗೆಟುಕಿದಂತೆ ಅವರವರ ವರ್ಣನೆ. ವಿಶ್ವಾಸಾರ್ಹತೆ ಲಾಟರಿ.

ಎಚ್.ಆರ್. ದೇಸಾಯಿ, ರಾಯಚೂರು
● ಚಳಿ ಹೆಚ್ಚಿದಾಗ ನೀರು ಹೆಪ್ಪುಗಟ್ಟುತ್ತದೆ, ಹಾಲು ಹೆಪ್ಪುಗಟ್ಟುತ್ತದೆ. ಆದರೆ ರಕ್ತ ಏಕೆ ಹೆಪ್ಪುಗಟ್ಟುವುದಿಲ್ಲ?
ಚಲಿಸುತ್ತಲೇ ಇರುತ್ತದಲ್ಲ. ಸ್ಥಾವರಕ್ಕೆ ಹೆಪ್ಪುಂಟು, ಜಂಗಮಕ್ಕೆ ಹೆಪ್ಪಿಲ್ಲ.

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು
● ಮಾಜಿ ಮಂತ್ರಿಗೂ, ಮಾಜಿ ಪ್ರೇಯಸಿಗೂ ಏನು ವ್ಯತ್ಯಾಸ?
ಮಾಜಿ ಪ್ರೇಯಸಿ ಎಂದಿಗೂ 'ಇಂದಿನ ಪ್ರೇಯಸಿಯೊಡನೆ ಸಮ್ಮಿಶ್ರ ಸಂಸಾರ ನಡೆಸೋಣ' ಎನ್ನುವುದಿಲ್ಲ.

ಉಮೇಶ ಕಾರಂತ, ಮಂಗಳೂರು
● ಹಳೆಯ ಕ್ಯಾಲೆಂಡರನ್ನು ಎಲ್ಲಿಡಲಿ?
ಅಟ್ಟದಲ್ಲಿ; ಆರು ವರ್ಷದ ನಂತರ ಮೇಲಿನ ಇಸವಿ ಬದಲಾಯಿಸಿ. ಮಿಕ್ಕದ್ದೆಲ್ಲ ಅದದೇ.

ಬೂಕನಕೆರೆ ವಿಜೇಂದ್ರ, ಮೈಸೂರು
● ಹೆಂಗಸರು ಸಣ್ಣ ಸಣ್ಣ ವಿಷಯಗಳಿಗೂ ನಗುವುದೇಕೆ?
ಸಣ್ಣ ಸಣ್ಣ ವಿಷಯಗಳಷ್ಟೇ ಹೊಳೆಯುವ ಮೊದ್ದರಿಗೂ ಪ್ರೋತ್ಸಾಹ ನೀಡಬೇಕೆನ್ನುವ ಸದಾಲೋಚನೆಯಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
● ಮಂತ್ರಿಗಳು ವಿಧಾನಸೌಧದಲ್ಲಿ ಮಲಗುವ ಉದ್ದೇಶವೇನು?



ದೇಶದ ಪ್ರಗತಿಯ ಬಗ್ಗೆ ಕನಸು ಕಾಣಬೇಕಲ್ಲ. ನಿದ್ರಿಸದೆ ಕನಸು ಬೀಳದು.

ತಲಕಾಡು ಶ್ರೀನಿಧಿ, ಬೆಂಗಳೂರು
● ರಾಜಕೀಯಕ್ಕೂ, ಸಿನಿಮಾರಂಗಕ್ಕೂ ಎಂತಹ ನಂಟು?
ಎರಡೂ ಕಡೆ ಅಳಲು ಗ್ಲಿಸರಿನ್/ವಿಕ್ಸ್ ಹಚ್ಚಿದ ಟವಲ್ ಬೇಕೇಬೇಕು.

ಪಿ.ಜೆ. ರಾಘವೇಂದ್ರ, ಮೈಸೂರು
● ಸಂಧಿಗಳ ಬಗ್ಗೆ ಪಾಠ ಮಾಡುತ್ತಿದ್ದ ನಾಯಕರೊಬ್ಬರಿಗೆ ಬಹುವಚನದ ಅರಿವಿಲ್ಲವೆ?
ಅರಿವಿಲ್ಲದೆ ಏನಿಲ್ಲ. ಅವರದು ಪಡೆದದ್ದನ್ನು ಹಿಂತಿರುಗಿಸುವ ಗುಣವಷ್ಟೆ.

■ ರಾಮ್